ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಅಂಕೋಲಾ
ಸಿಸಿ ನಂಬರ. 557/2023

ಸಿ ಡಬ್ಲ್ಯೂ-3
ಪಿ ಡಬ್ಲ್ಯೂ- 2

ದಿಃ 13-06-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಸಾಕ್ಷಿಯ ಹೆಸರುಃ ಸಮೃದ್ಧ ನಾಯಕ
ತಂದೆಯ ಹೆಸರುಃ ನಾರಾಯಣ ನಾಯಕ
ವಯಸ್ಸುಃ 27 ವರ್ಷ
ಉದ್ಯೋಗಃ ಖಾಸಗಿ ಕೆಲಸ
ವಿಳಾಸಃ ಬಾವಿಕೇರಿ, ಅಂಕೋಲಾ.

ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದಃ

ನನಗೆ ಚಾಸಾ-2 ರವರ ಪರಿಚಯವಿರುತ್ತದೆ. ದಿಃ13-04-2023 ರಂದು ಚಾಸಾ-1 ರವರು ತೋರಿಸಿದ ಘಟನಾ ಸ್ಥಳದ ಪಂಚನಾಮೆಯನ್ನು ಜರುಗಿಸಲಾಯಿತು. ಆ ಸಮಯದಲ್ಲಿ ಪೊಲೀಸರು ಮತ್ತು ಚಾಸಾ-2 ರವರು ಹಾಜರಿದ್ದರು. ಅಪಘಾತದ ವಿಷಯವಾಗಿ ಪಂಚನಾಮೆಯನ್ನು ಜರುಗಿಸಲಾಯಿತು. ಬಾವಿಕೇರಿಯ ಬಾಲಚಂದ್ರ ನಾಯಕ ಇವರ ಮನೆಯ ಮುಂದೆ ಚಾಸಾ-1 ರವರ ಹೆಂಡತಿಯಾದ ಶೋಭಾ ಇವರಿಗೆ ಆಟೋ ರೀಕ್ಷಾ ಬಂದು ಡಿಕ್ಕಿ ಹೊಡೆದಿರುತ್ತದೆ ಎಂದು ಹೇಳಿರುತ್ತಾರೆ. ಚಾಸಾ-1 ರವರು ಹೆಂಡತಿಯು ಡಿಕ್ಕಿ ಹೊಡೆದ ರಭಸಕ್ಕೆ ಮೃತಪಟ್ಟಿರುತ್ತಾರೆ ಎಂದು ಚಾಸಾ-1 ರವರು ತಿಳಿಸಿದ

ಸ್ಥಳದ ಪಂಚನಾಮೆಗೆಂದು ಹೋಗಿರುತ್ತೇನೆ. ಪಂಚನಾಮೆಯನ್ನು ಬೆಳಿಗ್ಗೆ 11 ರಿಂದ ಮಧ್ಯಾಹ್ನ 12.15 ಗಂಟೆಯವರೆಗೆ ಜರುಗಿಸಲಾಯಿತು. ನಂತರ ನಕಾಶೆ ಹಾಗೂ ಪೋಟೋವನ್ನು ತೆಗೆದುಕೊಂಡಿರುತ್ತಾರೆ. ಸಾಕ್ಷಿಯು ಈಗಾಗಲೇ ನಿಪಿ–3 ಎಂದು ಗುರುತಿಸಲಾದ ಅಪಘಾತ ಸ್ಥಳದ ಪಂಚನಾಮೆ ಮೇಲಿರುವ ಸಹಿಯನ್ನು ಸಾಕ್ಷಿಯು ಗುರುತಿಸಿದ್ದು, ಅದನ್ನು ನಿಪಿ–3 ಬಿ ಎಂದು ಗುರುತಿಸಾಯಿತು. ನಿಪಿ–4 ನಕಾಶೆ ಮೇಲಿರುವ ಸಹಿಯನ್ನು ನಿಪಿ–4 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ–5 ರಿಂದ 8 ಪೊಟೋಗಳನ್ನು ಗುರುತಿಸುತ್ತಾರೆ.

ಪಾಟೀ ಸವಾಲನ್ನು ವಿನಂತಿ ಮೇರೆಗೆ ಮೂಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ).

ಓ ಹೇ ಕೇ ಸರಿ ಇದೆ

ಹೆಚ್ಚುವರಿ ಜೆ.ಎಂ.ಎಫ್.ಸಿ., ಅಂಕೋಲಾ.